ದೊಡ್ಡ ಮಾತೇ. ನಿನ್ನ ತಾಯಿ ನಿನಗೆ ಒಳ್ಳೆಯ ಸಂಸ್ಕಾರ ಕೊಟ್ಟಿದ್ದಾರೆ. ಒಳ್ಳೆಯ ಸಂಸ್ಕಾರವನ್ನು ತಂದೆ ತಾಯಿಗಳೇ ಕೊಡಲು ಸಾಧ್ಯ. ನಿನಗೆ ಗೊತ್ತಾ, ನಾವು ಒಂದು ಹುಡುಗನನ್ನು ನಮ್ಮ ಹತ್ತಿರ ಇಟ್ಟುಕೊಂಡಿದ್ದೆವು. ಅವನಿಗೆ ಒಳ್ಳೆಯ ಸಂಸ್ಕಾರಕೊಟ್ಟು ಬೆಳೆಸಲು ಪ್ರಯತ್ನಿಸಿದೆವು. ಅವನು ನನ್ನ ತಂಗಿಯ ಮಗನೇ ಆಗಿದ್ದ. ನಾವು ಕರೆದುಕೊಂಡು ಬಂದಾಗ ಅವನಿಗಿನ್ನೂ ಐದೇ ವರ್ಷ. ತುಂಬ ಪ್ರೀತಿಯಿಂದ, ಮಮತೆಯಿಂದ ನೋಡಿಕೊಂಡೆವು. ಯಾವುದಕ್ಕೂ ಕಡಿಮೆ ಮಾಡಲಿಲ್ಲ. ಆದರೆ ಒಳ್ಳೆಯ ಸಂಸ್ಕಾರ ಕೊಡುವಲ್ಲಿ ವಿಫಲರಾದೆವು. ಅವನನ್ನು ಅಧಿಕಾರದಿಂದ ಅನುಶಾಸನದಲ್ಲಿಡಲು ನಮ್ಮಿಂದ ಸಾಧ್ಯವಾಗಲಿಲ್ಲ. ಯಾಕೆಂದರೆ ಅವನು ನಮ್ಮ ಮಗನಾಗಿರಲಿಲ್ಲ. ನಮ್ಮ ಕಣ್ಣೆದುರಿಗೇ ಅವನು ಅಡ್ಡಹಾದಿ ಹಿಡಿಯುವುದನ್ನು ನೋಡಬೇಕಾಯಿತು. ನಮ್ಮ ಪ್ರೀತಿಗೆ ತಣ್ಣೀರೆರಚಿ ಒಂದು ದಿನ ಅವನು ತನ್ನ ಮಾಮಿಯ ಚಿನ್ನದ ಸರವನ್ನೇ ಅಪಹರಿಸಿ ಓಡಿಹೋಗಿಬಿಟ್ಟ. ಅವನಮ್ಮನಿಂದ ನಮ್ಮ ಅಸಡ್ಡೆಯಿಂದಲೇ ಅವನು ಹಾಳಾದನೆಂಬ ಮಾತು ಕೇಳಬೇಕಾಯಿತು. ಆವಾಗಿನಿಂದ ಬೇರೆಯವರ ಮಕ್ಕಳನ್ನು ಇಟ್ಟುಕೊಂಡು ಸಾಕಬೇಕೆಂಬ ಆಶೆಯನ್ನು ಬಿಟ್ಟು ಬಿಟ್ಟೆವು. ನಿನ್ನಂಥ ಬುದ್ಧಿವಂತ, ಪ್ರಾಮಾಣಿಕ ವಿದ್ಯಾರ್ಥಿಗಳಿಗೆ ಸಹಾಯ ಮಾಡಿ ನಮ್ಮ ಆಶೆ ತೀರಿಸಿಕೊಳ್ಳಬೇಕೆಂದು ನಿಶ್ಚಯಿಸಿದೆವು.

ನಿನ್ನ ತಾಯಿ ನಿನಗೆ ಒಳ್ಳೆಯ ಸಂಸ್ಕಾರ ಕೊಟ್ಟು ಬೆಳೆಸಿದ್ದಾಳೆ. ದೇವರು ಅವರನ್ನು ಚೆನ್ನಾಗಿ ಇಟ್ಟಿರಲಿ. ನೀನು ಅವರ ಆಶೆಯನ್ನು ಪೂರೈಸು.'

ಚಿಕ್ಕಪ್ಪ ಎದ್ದು ಹೊರಗೆ ಹೋದ ಮೇಲೆ ಅವರ ಹಾರೈಕೆಯಿಂದ ಪುಳಕಿತನಾಗಿ ದೀಪಕ ತುಂಬ ಹೊತ್ತು ಮೈಮರೆತು ಹಾಗೇ ಕುಳಿತುಕೊಂಡಿದ್ದ. ಅವನ ಆತ್ಮವಿಶ್ವಾಸ ಇಮ್ಮಡಿಯಾಗಿತ್ತು.

## ಮಾಲತಿ ಜೋಶಿ

ಔರಂಗಾಬಾದ್‌ನಲ್ಲಿ ಹುಟ್ಟಿ ಬೆಳೆದ ಮಾಲತಿ ಜೋಶಿ ಅವರದು ಹಿಂದೀ ಸಾಹಿತ್ಯದಲ್ಲಿ ಚಿರಪರಿಚಿತ ಹೆಸರು. ಆಗ್ರಾ ವಿಶ್ವವಿದ್ಯಾಲಯದ ಹಿಂದೀ ಸ್ನಾತಕೋತ್ತರ ಪದವೀಧರೆ. 'ಆನಂದಿ', 'ಅಪನೆ ಆಂಗನ್ ಕಿ ಚಾವ್', 'ಬಾಬುಲ್ ಘರ್', 'ಏಕ್ ಸಾರ್ಥಕ್ ದಿನ್' ಸೇರಿದಂತೆ 27 ಕಥಾಸಂಕಲನಗಳನ್ನು, ಐದು ಮಕ್ಕಳ ಕಥಾಸಂಗ್ರಹಗಳನ್ನು, ಎರಡು ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಮುಂಬೈಯಲ್ಲಿ ವಾಸ.

## ಲೀಲಾ ನಾಯಿಕ

ಹುಟ್ಟೂರು ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ. ನಾಲ್ಕನೇ ತರಗತಿಯವರೆಗೆ ಶಾಲಾ ಶಿಕ್ಷಣ. ಮದುವೆಯ ನಂತರ ಮುಲ್ಕಿ ಪರೀಕ್ಷೆ ಪಾಸು ಮಾಡಿಕೊಂಡರು. ನಂತರ ಹಿಂದಿ ಶಿಕ್ಷಕ್ ಹಾಗೂ ಖೋವಿದ್ ಪದವಿ ಪಡೆದು ಹಿಂದಿಯಿಂದ ಕನ್ನಡಕ್ಕೆ, ಕನ್ನಡದಿಂದ ಹಿಂದಿಗೆ ಸಾಹಿತ್ಯ ಕೃತಿಗಳನ್ನು ಅನುವಾದಿಸಿದ್ದಾರೆ. ಹಿಂದೀ ಭಾಷೆಯಲ್ಲಿ 'ವಾಸ್ತವ್' (ಕನ್ನಡ ಲೇಖಕಿಯರ 14 ಕತೆಗಳ ಅನುವಾದ) ಎಂಬ ಕಥಾಸಂಗ್ರಹ ಪ್ರಕಟವಾಗಿದೆ. 18 ಕನ್ನಡ ಸಾಹಿತಿಗಳ ಪರಿಚಯವನ್ನೊಳಗೊಂಡ 'ಕನ್ನಡ ಸಾಹಿತ್ಯಕೆ ಕೀರ್ತಿ ಕಲಶ್' ಹಾಗೂ 'ಕರ್ನಾಟಕ್‌ಕೆ ಪ್ರತಿಭಾಶಾಲಿ ಮಹಿಳಾಯೆ' ಕೃತಿಗಳು ಪ್ರಕಟಗೊಂಡಿವೆ. ಅವರು ಇತ್ತೀಚೆಗೆ ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿದ ಪುಸ್ತಕ 'ತಲ್ಲಣ'. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.